# ಮಾದರಿ ಉತ್ತರಗಳು

| ಪ್ರಶ್ನೆ ಸಂಖ್ಯೆ | ಮಾದರಿ ಉತ್ತರಗಳು | ಅಂಕ ಹಂಚಿಕೆ |
|---|---|---|
| 1 | ಸಿ) ಬಾಲಗಂಗಾಧರ ತಿಲಕ್ | 1 |
| 2 | ಬಿ) ಡಾಲ್ ಹೌಸಿ | 1 |
| 3 | ಡಿ) ಮುಂಬೈ | 1 |
| 4 | ಸಿ) ಬಾಲಕಾರ್ಮಿಕತೆಯ ನಿಷೇಧ | 1 |
| 5 | ಬಿ) ಪಂಪ | 1 |
| 6 | ಎ) ರಾಷ್ಟ್ರಾಧ್ಯಕ್ಷರು | 1 |
| 7 | ಡಿ) ಸಂಪತ್ತಿನ ತೆರಿಗೆ | 1 |
| 8 | ಎ) ವಿಶ್ವ ಗ್ರಾಹಕರ ಹಕ್ಕುಗಳ ದಿನ | 1 |
| 9 | ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕ ಸೌಮ್ಯಕ್ಕಾಗಿ ನೌಕಾ ಶಕ್ತಿಯನ್ನು ಬಲಪಡಿಸಲು ಜಾರಿಗೆ ತಂದನು | 1 |
| 10 | ಹಲಗಲಿಯ ಬೇಡರು ಬ್ರಿಟಿಷರು ತಂದ ಶಸ್ತ್ರಗಳ ನಿರ್ಬಂಧ ಕಾನೂನು ತಂದಿದ್ದರಿಂದ ಹಾಗೂ ತಮ್ಮ ಪರಂಪರಾಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ದಂಗೆ ಎದ್ದರು | 1 |
| 11 | ಸಾರ್ವಜನಿಕ ಆಡಳಿತದ ಪಿತಾಮಹ ವುಡ್ರೋ ವಿಲ್ಸನ್ | 1 |
| 12 | ಒಬ್ಬ ಉದ್ಯಮಿಯು ತನ್ನ ಉದ್ಯಮೆಯನ್ನ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಶೀಲತೆ ಎನ್ನುತ್ತೇವೆ | 1 |
| 13 | ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದರು ಹಾಗಾಗಿ ಅವರನ್ನು ಭಾರತದ ಆರ್ಥಿಕ ಯೋಜನೆಯ ಪಿತಾಮಹ ಎಂದು ಕರೆಯಲಾಗಿದೆ | 1 |
| 14 | ಮೌಸಿನ್ ರಾಮ್ | 1 |
| 15 | ಆಧುನಿಕ ತಂತ್ರಜ್ಞಾನದ ಮೂಲಕ ಗರ್ಭದಲ್ಲಿರುವ ಲಿಂಗಪತ್ತೆ ಹಚ್ಚುವುದನ್ನು ನಿಯಂತ್ರಿಸಲು | 1 |

Scanned with OKEN Scanner

| | | |
|---|---|---|
| | | |
| 16 | ಅಲ್ಯುಮಿನಿಯಂ ನ್ನು ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ ಇದನ್ನು 20ನೇ ಶತಮಾನದ ಅದ್ಭುತ ಲೋಹವೆಂದು ಕರೆಯಲಾಗಿದೆ | 1 |
| 17 | **ಮಾನವ ಹಕ್ಕುಗಳ ಪ್ರತಿಪಾದನೆ : -**<br>• ಮಾನವ ಹಕ್ಕುಗಳ ಪ್ರತಿಪಾದನೆ<br>• ವಿಶ್ವದ ತುಂಬಾ ಮಾನವ ಹಕ್ಕುಗಳು ಸುರಕ್ಷಿತವಾಗಿ ಇರಬೇಕೆಂಬ ವಾದ<br>• ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನಮೂದು<br>• ಎಲ್ಲಾ ಶೋಷಣೆ ಮತ್ತು ದಬ್ಬಾಳಿಕೆಗೆ ವಿರೋಧ<br>• ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ರಕ್ಷಣೆ<br>• ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗ ಸ್ಥಾಪನೆ<br><br>ಅಥವಾ<br>**ಕಳ್ಳ ಸಾಗಣಿಕೆ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ**<br>• ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗಿದೆ<br>• ಅನಪೇಕ್ಷಿತ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ<br>• ದೇಶದ ಆರ್ಥಿಕತೆಗೆ ಆನೆ ಉಂಟು ಮಾಡುತ್ತದೆ<br>• ಕೈಗಾರಿಕೆ ಮಾರುಕಟ್ಟೆಗೆ ಹಾನಿಕಾರಕ | ½<br>½<br>½<br>½ |
| 18 | **ಚಿಪ್ಕೋ ಚಳುವಳಿ**<br>• ಉತ್ತರ ಖಂಡದ ತೆಹರಿ ಗರ್ವಾಲ್ ಜಿಲ್ಲೆಯಲ್ಲಿ ಚಳುವಳಿ ಆರಂಭ<br>• ಇದರಿಂದ ಅರಣ್ಯ ನಾಶವಾಗುತ್ತದೆ ಎಂದು ಜನರು ಮರಗಳನ್ನು ಅಪ್ಪಿ ಹಿಡಿದರು<br>• ಈ ಚಳುವಳಿ 1973 ರಲ್ಲಿ ನಡೆಯಿತು<br>• ಈ ಚಳುವಳಿಯ ನೇತೃತ್ವವನ್ನು ಸುಂದರ್ಲಾಲ್ ಬಹುಗುಣ ಮತ್ತು ಚಂಡಿ ಪ್ರಸಾದ್ ಭಟ್ಟವರು ವಹಿಸಿದ್ದರು<br>• ಈ ಚಳುವಳಿಯ ಪರಿಣಾಮದಿಂದ ಮರ ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು<br>ಅಥವಾ<br>**ಬಾಲ್ಯ ವಿವಾಹಕ್ಕೆ ಕಾರಣಗಳು**<br>• ಲಿಂಗ ತಾರತಮ್ಯ<br>• ಶಿಕ್ಷಣ ಇಲ್ಲದಿರುವಿಕೆ<br>• ಬಾಲಕಾರ್ಮಿಕತೆ<br>• ಮಕ್ಕಳ ಸಾಗಾಣಿಕೆ ಮತ್ತು ಮಾರಾಟ<br>• ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ<br>• ಸಾರ್ವಜನಿಕ ಅಸಹಕಾರ | ½<br>½<br>½<br>½ |

Scanned with OKEN Scanner

| | | |
|---|---|---|
| | • ಮಕ್ಕಳ ಹಕ್ಕುಗಳ ದೋಷಪೂರಿತ ಅನುಷ್ಠಾನ | |
| 19 | **ಹೈದರಾಬಾದ್ ಭಾರತದ ಒಕ್ಕೂಟದಲ್ಲಿ ವಿಲೀನ**<br>• ನಿಜಾಮನು ಸ್ವಾತಂತ್ರ ವಾಗಿರಲು ಬಯಸಿದ<br>• ತೆಲಂಗಾಣದಲ್ಲಿ ನಿಜಾಮನ ವಿರುದ್ಧ ರೈತರ ಹೋರಾಟ<br>• ರಜಾಕರ ಬಗ್ಗೆ ಜನರಲ್ಲಿ ವ್ಯಾಪಕ ವಿರೋಧವಿತ್ತು<br>• ಭಾರತದ ಸೈನ್ಯ ನಿಜಾಮನನ್ನು ಸೋಲಿಸಿತು<br>• 1948ರಲ್ಲಿ ಭಾರತದಲ್ಲಿ ಹೈದರಾಬಾದ್ ವಿಲೀನಗೊಂಡಿತು | ½<br>½<br>½<br>½ |
| 20 | • ರಾಬರ್ಟ್ ಕ್ಲೈವನು ಜಾರಿಗೆ ತಂದನು<br>• 1965ರಲ್ಲಿ ಇದನ್ನ ಬಂಗಾಳದಲ್ಲಿ ಜಾರಿಗೊಳಿಸಲಾಯಿತು<br>• ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ದಿವಾನಿ ಹಕ್ಕನ್ನು ಪಡೆದರು<br>• ರಾಜ್ಯ ಆಡಳಿತ ನವಾಬನಿಗೆ ಸೇರಿದ್ದು<br>• ಈ ನೀತಿಯು ಬ್ರಿಟಿಷರಿಗೆ ಬಂಗಾಳದಲ್ಲಿ ಭದ್ರವಾಗಿ ನೆಲೆಯೂರಲು ಕಾರಣವಾಯಿತು | ½<br>½<br>½<br>½ |
| 21 | **ಪ್ರವಾಹದ ಪರಿಣಾಮಗಳು**<br>• ಅಪಾರ ಪ್ರಮಾಣದ ಸಾವು ನೋವು<br>• ಬೆಳೆಗಳ ಸಂಪೂರ್ಣ ನಾಶ<br>• ಫಲವತ್ತಾದ ಮಣ್ಣಿನ ಸವೆತ<br>• ಸಾರಿಗೆ ಸಂಪರ್ಕ ಹಸ್ತವ್ಯಸ್ತ<br>• ವಿದ್ಯುತ್ ಸೌಕರ್ಯ ಅಸ್ತವ್ಯಸ್ತ<br>• ಜನಜೀವನ ಅಸ್ತವ್ಯಸ್ತ ಗೊಳ್ಳುತ್ತದೆ<br>• ನದಿಗಳು ತಮ್ಮ ದಿಕ್ಕನ್ನ ಬದಲಾಯಿಸಬಹುದು<br>• ಸಾಂಕ್ರಾಮಿಕ ರೋಗಗಳ ಭೀತಿ | ½<br>½<br>½<br>½ |
| 22 | **ಶಿವಾಲಿಕ ಶ್ರೇಣಿಯ ಲಕ್ಷಣಗಳು**<br>• ಹಿಮಾಲಯ ಪರ್ವತಗಳಲ್ಲಿ ಇತ್ತೀಚಿಗೆ ನಿರ್ಮಾಣವಾಗಿವೆ<br>• ಇವು ಅತ್ಯಂತ ದಕ್ಷಿಣದಲ್ಲಿರುವ ಸರಣಿ<br>• ಇವು ಕಡಿಮೆ ಎತ್ತರವನ್ನ ಹೊಂದಿವೆ<br>• ಇವುಗಳನ್ನು ಹಿಮಾಲಯದ ಪಾದ ಬೆಟ್ಟಗಳು ಎಂದು ಕರೆಯುವರು<br>• ಇಲ್ಲಿ ಸಮತಟ್ಟಾದ ಕಿರಿದಾದ ಮೈದಾನಗಳಿವೆ | ½<br>½<br>½<br>½ |
| 23 | **ಸುಗ್ಗಿ ಪೂರ್ವ ತಂತ್ರಜ್ಞಾನವು ಹಸಿರು ಕ್ರಾಂತಿಯನ್ನು ಪ್ರಭಾವಿಸಿತು**<br>• ಹೆಚ್ಚು ಇಳುವರಿಯ ಬೀಜಗಳು<br>• ರಾಸಾಯನಿಕ ಗೊಬ್ಬರ<br>• ಕ್ರಿಮಿನಾಶಕಗಳ ಬಳಕೆ | ½<br>½<br>½<br>½ |

Scanned with OKEN Scanner

| | | |
|---|---|---|
| | • ನೀರಾವರಿ ಸೌಲಭ್ಯ ವಿಸ್ತರಣೆ<br>• ಸುಧಾರಿತ ತಂತ್ರಜ್ಞಾನದ ಬಳಕೆ | |
| 24 | • ಗುಣಮಟ್ಟಕ್ಕೆ ಮೊದಲ ಪ್ರಶಸ್ತ್ಯ<br>• ತೂಕ ಮತ್ತು ಬೆಲೆಗಳ ಮೇಲೆ ನಿಗಾ<br>• ಅಪಾಯಕಾರಿ ವಸ್ತುಗಳ ಮಾರಾಟ ತಪ್ಪಿಸುವುದು<br>• ಗ್ರಾಹಕರಿಗೆ ಪರಿಹಾರ ಕೊಡಿಸುವುದು<br>• ಅನುಚಿತ ವ್ಯವಹಾರ ತಡೆಯುವುದು<br>• ಜನರಲ್ಲಿ ಜಾಗೃತಿ ಮೂಡಿಸುವುದು | ½<br>½<br>½<br>½ |
| 25 | **ಭಾರತದ ಇತಿಹಾಸದಲ್ಲಿ 19ನೇ ಶತಮಾನ ಭಾರತೀಯ ಪುನರುಜ್ಜೀವನ ಕಾಲ**<br>• ಪಾಶ್ಚಿಮಾತ್ಯ  ನಾಗರಿಕತೆಯ ಸಂಪರ್ಕ<br>• ಇಂಗ್ಲಿಷ್ ಶಿಕ್ಷಣ ಸೌಲಭ್ಯ<br>• ಭಾರತೀಯರಲ್ಲಿ ಉಂಟಾದ ವೈಚಾರಿಕ ಮನೋಭಾವ<br>• ಮೂಢನಂಬಿಕೆಗಳ ಪ್ರಶ್ನಿಸುವ ಮನೋಭಾವ<br>• ಪ್ರಜಾಪ್ರಭುತ್ವ ಸ್ವಾತಂತ್ರ್ಯ ಸಮಾನತೆ ರಾಷ್ಟ್ರೀಯತೆಯ ಪರಿಕಲ್ಪನೆಗಳ ಪರಿಚಯ<br>• ಸಮಾಜದ ಸುಧಾರಣೆಗಾಗಿ ನಡೆದ ಪ್ರಯತ್ನ<br>ಅಥವಾ<br>**ಸಹಾಯಕ ಸೈನ್ಯ ಪದ್ಧತಿಯ ಅಂಶಗಳು**<br>• ದೇಶಿಯರಾಜ ಬ್ರಿಟಿಷರ ಸೇನಾ ತುಕಡಿ ರಾಜ್ಯದಲ್ಲಿ ಇರಿಸಿಕೊಳ್ಳಬೇಕು<br>• ದೇಶಿಯ ರಾಜರು ಸೇನೆಯ ಖರ್ಚು ವೆಚ್ಚಗಳನ್ನು ಭರಿಸಬೇಕು<br>• ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನ ನೇಮಕ<br>• ದೇಶಿಯ ರಾಜರುಗಳು ಆಸ್ಥಾನದಲ್ಲಿ ಇತರೆ ಯುರೋಪಿಯನ್ನರನ್ನ ನೇಮಕ ಮಾಡಿಕೊಳ್ಳುವಂತಿಲ್ಲ<br>• ಯುದ್ಧ ಅಥವಾ ಸಂತಾನದಲ್ಲಿ ಬ್ರಿಟಿಷರ ಅನುಮತಿ ಪಡೆಯಬೇಕು<br>• ಕಂಪನಿ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ನೀಡುವುದು | ½<br>½<br>½<br>½<br>½<br>½ |
| 26 | **ಭೂ ಬಳಕೆಯ ಪ್ರಕಾರಗಳು**<br>• ನಿವ್ವಳ ಸಾಗುವಳಿ ಕ್ಷೇತ್ರ<br>• ಅರಣ್ಯ ಭೂಮಿ<br>• ವ್ಯವಸಾಯೇತರ ಭೂ ಬಳಕೆ<br>• ಬೀಳು ಭೂಮಿ<br>• ಹುಲ್ಲುಗಾವಲು<br>• ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ<br>ಅಥವಾ | ½<br>½<br>½<br>½<br>½<br>½ |

Scanned with OKEN Scanner

| | | |
|---|---|---|
| | **ಕೈಗಾರಿಕೆ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳು**<br>• ಕಚ್ಚಾ ವಸ್ತು<br>• ಶಕ್ತಿ ಸಂಪನ್ಮೂಲಗಳು<br>• ಮಾರುಕಟ್ಟೆ<br>• ಸಂಚಾರ ಸೌಲಭ್ಯ<br>• ಕಾರ್ಮಿಕರ ಪೂರೈಕೆ<br>• ಬಂದರುಗಳ ಸೌಲಭ್ಯ<br>• ತಾಂತ್ರಿಕತೆ<br>• ಕಡಿಮೆ ದರದಲ್ಲಿ ಭೂಮಿ ದೊರೆಯುವಿಕೆ<br>• ಸರ್ಕಾರದ ನೀತಿಗಳು | |
| 27 | **ಬ್ಯಾಂಕು ಖಾತೆಗಳು ಜನರಿಗೆ ಉಪಯುಕ್ತವಾಗಿವೆ**<br>• ಹಣದ ಭದ್ರತೆ ಕಾಪಾಡುತ್ತವೆ<br>• ಹಣದ ಪಾವತಿಗಳನ್ನು ಮಾಡಲು ಸಹಾಯಮಾಡುತ್ತದೆ<br>• ಹಣವನ್ನು ವಸೂಲು ಮಾಡಲು ಸಹಾಯಮಾಡುತ್ತದೆ<br>• ಸಾಲ ಪಡೆಯಲು ಸಾಧ್ಯವಾಗುತ್ತದೆ<br>• ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ<br>• ಭದ್ರತಾ ಕಪಾಟುಗಳನ್ನು ಪಡೆಯಬಹುದು<br>ಅಥವಾ<br>**ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿ**<br>• ಬಂಡವಾಳ ನಿರ್ಮಾಣ<br>• ಉದ್ಯೋಗಾವಕಾಶಗಳ ಸೃಷ್ಟಿ<br>• ತಲಾದಾಯ ಹೆಚ್ಚಿಸುತ್ತಾನೆ<br>• ತಾರತಮ್ಯ ನಿವಾರಣೆ<br>• ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾನೆ<br>• ಅಭಿವೃದ್ಧಿಗೆ ಸಹಕರಿಸುತ್ತಾನೆ<br>• ಜೀವನಮಟ್ಟ ಸುಧಾರಣೆಗೆ ಶ್ರಮ<br>• ಸಂಪತ್ತಿನ ವಿಕೇಂದ್ರೀಕರಣ | ½<br>½<br>½<br>½<br>½<br>½ |
| 28 | **ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ**<br>• ಮೂಲಸೌಕರ್ಯ ಕಲ್ಪಿಸುವುದು<br>• ಮಾನವ ಸಂಪನ್ಮೂಲ ಅಭಿವೃದ್ಧಿ<br>• ಗ್ರಾಮೀಣ ಉತ್ಪಾದಕ ಚಟುವಟಿಕೆಗಳ ಅಭಿವೃದ್ಧಿ<br>• ಉದ್ಯೋಗ ಒದಗಿಸುವುದು<br>• ನೀರಾವರಿ ಸೌಲಭ್ಯ ನೀಡುವುದು<br>• ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ<br>• ಉದ್ಯೋಗ ನಿರ್ಮಾಣ<br>• ಬಡತನ ನಿರ್ಮೂಲನ ಯೋಜನೆಗಳ ಅನುಷ್ಠಾನ | ½<br>½<br>½<br>½<br>½<br>½ |

Scanned with OKEN Scanner

| | | |
|---|---|---|
| | • ವಸತಿ ಯೋಜನೆಗಳ ಅನುಷ್ಠಾನ<br>• ಪಡಿತರ ವ್ಯವಸ್ಥೆ ಬಲಪಡಿಸುವುದು<br>• ಸಾಮಾಜಿಕ ಕಲ್ಯಾಣ ಸೇವೆ ಒದಗಿಸುವುದು<br>• ಮಹಿಳಾ ಅಭಿವೃದ್ಧಿಗೆ ಪ್ರೋತ್ಸಾಹ<br>• ಗ್ರಾಮೀಣ ಸಂಸ್ಕೃತಿಯ ಶ್ರೀಮಂತ ಗೊಳಿಸುವುದು<br>ಅಥವಾ<br>**ಕೇಂದ್ರ ಸರ್ಕಾರದ ತೆರಿಗೆ ತರ ಆದಾಯದ ಮೂಲಗಳು**<br>• ರಿಸರ್ವ್ ಬ್ಯಾಂಕ್ ಗಳಿಸುವ ನಿವ್ವಳ ಲಾಭ<br>• ರೈಲ್ವೆ ಗಳಿಸುವ ನಿವಳ ಲಾಭ<br>• ಅಂಚೆ ದೂರವಾಣಿಯಿಂದ ಬರುವ ಆದಾಯ<br>• ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ<br>• ನಾಣ್ಯ ಟಂಕಸಾಲೆಯಿಂದ ಬರುವ ಆದಾಯ<br>• ವಿವಿಧ ಶುಲ್ಕಗಳು ಮತ್ತು ದಂಡಗಳು | |
| 29 | **ವಿಶ್ವ ಸಂಸ್ಥೆಯ ಸಾಧನೆಗಳು**<br>• ಕೊರಿಯಾ ವಿವಾದ ಸುಯೆಸ್ ಕಾಲುವೆ ಬಿಕ್ಕಟ್ಟು ನಿವಾರಣೆ<br>• ವಿಯಟ್ ನಮ್ ಸಮಸ್ಯೆಗಳನ್ನ ಬಗೆಹರಿಸಿದೆ<br>• ಕಾಶ್ಮೀರ ಪ್ಯಾಲಿಸ್ತೆಯನ್ ಇಸ್ರೇಲ್ ವಿವಾದ ನಿವಾರಣೆಗೆ ಶ್ರಮ ವಹಿಸುತ್ತಿದೆ<br>• ನಿಶಸ್ತ್ರಿಕರಣ ಸಾಧಿಸುವಲ್ಲಿ ಪ್ರಯತ್ನ<br>• ಐಬಿಆರ್‌ಡಿ ಐಎಂಎಫ್ ಡಬ್ಲ್ಯೂ ಟಿ ಓ ಗಳ ಸಹಾಯದಿಂದ ಅಂತರಾಷ್ಟ್ರೀಯ ಹಣಕಾಸು ಮತ್ತು ವ್ಯಾಪಾರದ ಸಮಸ್ಯೆ ಪರಿಹರಿಸಲು ಪ್ರಯತ್ನ<br>• ಡಬ್ಲ್ಯೂ ಎಚ್ ಓ ದ ಮೂಲಕ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ನಿರ್ಮೂಲನೆಗೆ ಪ್ರಯತ್ನ<br>• ವಿಶ್ವದ್ಯಂತ ಮಾನವ ಹಕ್ಕುಗಳನ್ನು ಜಾರಿಗೆ ತರಲು ಪ್ರಯತ್ನ<br>• ವರ್ಣಭೇದ ನೀತಿ ಸಾಮ್ರಾಜ್ಯಶಾಹಿತ್ವ ವಸಾಯಿತ್ವಕ್ಕೆ ಅಂತ್ಯವಾಡಲು ಶ್ರಮ<br>• ಜಾಗತಿಕ ತಾಪಮಾನ ಹೆಚ್ಚಳದಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ಪ್ರಯತ್ನಿಸುತ್ತಿದೆ | ½<br>½<br>½<br>½<br>½<br>½ |
| 30 | **ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸ**<br>**ಸಂಘಟಿತ ಕೆಲಸಗಾರರು**<br>• ಕಾನೂನಿಗೆ ಬದ್ಧವಾಗಿ ನಿಗದಿತ ಕ್ಷೇತ್ರದಲ್ಲಿ ಕೆಲಸ<br>• ನಿಶ್ಚಿತ ನಿಯಮಗಳಿವೆ<br>• ವಿಶೇಷ ತರಬೇತಿ ಶೈಕ್ಷಣಿಕ ಅರ್ಹತೆ<br>• ಕೆಲಸದ ಭದ್ರುತೆ ನಿಗದಿತ ವೇತನ ವೈದ್ಯಕೀಯ ಸೌಲಭ್ಯ | ½<br>½<br>½<br>½<br>½<br>½ |

Scanned with OKEN Scanner

| | | |
|---|---|---|
| | • ಉದಾಹರಣೆ ಸರ್ಕಾರಿ ವಿಮಾ ಕಂಪನಿ ಕೆಲಸಗಾರರು<br>**ಅಸಂಘಟಿತ ಕೆಲಸಗಾರರು**<br>• ಯಾವುದೇ ಕಾಯ್ದೆಯ ನಿಯಂತ್ರಣಕ್ಕೆ ಒಳಪಟ್ಟಿಲ್ಲ<br>• ವಿವಿಧ ಕಸುಬುಗಳಲ್ಲಿ ತೊಡಗಿರುತ್ತಾರೆ<br>• ನಿಶ್ಚಿತ ನಿಯಮಗಳಿಲ್ಲ<br>• ಕೆಲಸದ ಭದ್ರತೆ ತರಬೇತಿ ನಿಗದಿತ ವೇತನ ಭತ್ಯೆಗಳಿರುವುದಿಲ್ಲ<br>• ಉದ್ಯೋಗದಾತರಿಂದ ಶೋಷಣೆ<br>• ಉದಾಹರಣೆಗೆ ಮನೆ ಕೆಲಸ ಗೃಹ ನಿರ್ಮಾಣ ಕೆಲಸಗಾರರು | |
| 31 | **1919ರ ಭಾರತ ಸರ್ಕಾರದ ಕಾಯ್ದೆಯ ಮುಖ್ಯ ಅಂಶಗಳು**<br>• ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆಗೆ ಅವಕಾಶ<br>• ಪ್ರಾಂತ್ಯಗಳಲ್ಲಿ ದ್ವಿ ಸರಕಾರ ಪದ್ಧತಿಗೆ ಅವಕಾಶ<br>• ಭಾರತಕ್ಕೆ ಒಬ್ಬ ಹೈ ಕಮಿಷನರ್ ನ ನೇಮಕ ಸ್ವಯಂ ಆಡಳಿತ ಉಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಬರವಸೆ<br>• ಕೇಂದ್ರ ಬಜೆಟ್ ನಿಂದ ಪ್ರಾಂತ್ಯಗಳ ಬಜೆಟ್ ಬೇರ್ಪಡಿಸಲಾಯಿತು<br>• ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆ | ½<br>½<br>½<br>½<br>½<br>½ |
| 32 | **ಎರಡನೆಯ ಮಹಾಯುದ್ಧದ ಪರಿಣಾಮಗಳು**<br>• ಅಪಾರ ಪ್ರಮಾಣದ ಸಾವು ನೋವು<br>• ಜಗತ್ತಿನ ರಾಜಕೀಯ ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ<br>• ವಿಶ್ವ ಸಂಸ್ಥೆಯ ಸ್ಥಾಪನೆ<br>• ಶೀತಲ ಸಮರಕ್ಕೆ ನಾಂದಿ<br>• ಏಷ್ಯಾ ಆಫ್ರಿಕಾ ಹೊಸಹಾತುಗಳ ಸ್ವಾತಂತ್ರ<br>• ಬ್ರಿಟನ್ ಫ್ರಾನ್ಸ್ ವಸಾಹಾತುಗಳನ್ನು ಕಳೆದುಕೊಂಡವು<br>• ಭಾರತ ಸ್ವತಂತ್ರಗೊಳಿಸಲು ಸಹಕಾರಿ<br>• ಅಣ್ವಸ್ತ್ರ ಪೈಪೋಟಿಗೆ ದಾರಿ | ½<br>½<br>½<br>½<br>½<br>½ |
| 33 | **ಮಣ್ಣಿನ ಸವೆತದ ದುಷ್ಪರಿಣಾಮಗಳು**<br>• ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ<br>• ನದಿ ತನ್ನ ಪಾತ್ರ ಬದಲಾಯಿಸುತ್ತದೆ<br>• ಅಣೆಕಟ್ಟುಗಳಲ್ಲಿ ನೀರು ಸಂಗ್ರಹಣ ಸಾಮರ್ಥ್ಯ ಕಡಿಮೆಯಾಗುತ್ತದೆ<br>• ನೀರಿನ ಹಿಂದುವಿಕೆಯ ಪ್ರಮಾಣ ಕಡಿಮೆಯಾಗುತ್ತದೆ<br>• ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ<br>• ಕೃಷಿ ಉತ್ಪಾದನೆ ಕಡಿಮೆಯಾಗುತ್ತದೆ | ½<br>½<br>½<br>½<br>½<br>½ |

Scanned with OKEN Scanner

| | | |
|---|---|---|
| 34 | **ಸ್ವಾತಂತ್ರ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಪಾತ್ರ**<br>• ನೇತಾಜಿ ಎಂದು ಖ್ಯಾತಿಯಾಗಿದ್ದರು<br>• ಗಾಂಧೀಜಿಯವರೊಂದಿಗೆ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್ಸನ್ನು ತೊರೆದರು<br>• ವಿದೇಶದಲ್ಲಿದ್ದ ಭಾರತೀಯರನ್ನ ಸಂಘಟಿಸಿದರು<br>• ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆ ಮಾಡಿದರು<br>• ಫಾರ್ವರ್ಡ್ ಬ್ಲಾಕ್ ಅನ್ನು ಸ್ಥಾಪಿಸಿದರು<br>• ಸ್ವಾತಂತ್ರ್ಯಕ್ಕಾಗಿ ಗೃಹಬಂಧನ ಅನುಭವಿಸಿದರು<br>• ಗೃಹಬಂಧನದಿಂದ ತಪ್ಪಿಸಿಕೊಂಡು ಹಿಟ್ಲರ್ ಸಹಾಯ ಮಾಡಿದರು<br>• ಆಜಾದ್ ಹಿಂದು ರೇಡಿಯೋ ಮೂಲಕ ಹೋರಾಟಕ್ಕೆ ಪ್ರಚೋದನೆ ನೀಡಿದರು<br>• ಐಎನ್ಎ ಸೈನ್ಯ ಸಂಘಟನೆ ಮಾಡಿದರು<br>• ದೆಹಲಿ ಚಲೋ ಚಳುವಳಿಗೆ ಕರೆ ನೀಡಿದರು<br>• ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಕರಿಸುತ್ತೇನೆ ಎಂದು ಕರೆ ನೀಡಿದರು<br>• ವಿಮಾನ ಅಪಘಾತದಲ್ಲಿ ಮರಣ ಹೊಂದಿದರು<br>ಅಥವಾ<br>**ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳು**<br>• ಶಿಕ್ಷಣವನ್ನ ವ್ಯಾಪಕವಾಗಿ ಹರಡಲು ತುಂಬಾ ಆಸಕ್ತಿ<br>• ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಶಿಕ್ಷಣ ಶುಲ್ಕ ರದ್ದು<br>• ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು<br>• ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ<br>• ಹಲವಾರು ಶಾಲಾ-ಕಾಲೇಜುಗಳ ಸ್ಥಾಪನೆ<br>• ವಿದೇಶ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ಜಾರಿ<br>• ಚಿನ್ನದ ಗಣಿ ಸುಧಾರಣೆ<br>• ಬೆಂಗಳೂರು ಮೈಸೂರಿನಲ್ಲಿ ಕಾಲೇಜು ಸ್ಥಾಪನೆ<br>• ಮಾರಿ ಕಣಿವೆ ಜಲಾಶಯ ನಿರ್ಮಾಣ<br>• ರೈಲು ಮಾರ್ಗ ಆಸ್ಪತ್ರೆಗಳ ಸ್ಥಾಪನೆ<br>• ಶಿವನಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರ ಸ್ಥಾಪನೆ<br>• ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ<br>• ಕೆ ಆರ್ ಎಸ್ ಆಣೆಕಟ್ಟು ನಿರ್ಮಾಣ<br>• ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳ ಸ್ಥಾಪನೆ<br>• ನ್ಯಾಯವಿದಾಯಕ ಸಭೆ ರಚನೆ | ½<br>½<br>½<br>½<br>½<br>½<br>½<br>½ |

Scanned with OKEN Scanner

| | | |
|---|---|---|
| 35 | **ಭಾರತೀಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮ**<br>• ಕಂಪನಿಯ ಆಡಳಿತ ಅಂತ್ಯ<br>• ರಾಣಿಯ ನೇರ ಆಡಳಿತ ಪ್ರಾರಂಭ<br>• ರಾಣಿಯಿಂದ ಉತ್ತಮ ಆಡಳಿತ ಭರವಸೆ<br>• ಭಾರತದ ವ್ಯವಹಾರ ಕಾರ್ಯದರ್ಶಿಗೆ ಆಡಳಿತ ಜವಾಬ್ದಾರಿ<br>• 1858ರ ಬ್ರಿಟನ್ ರಾಣಿಯ ಘೋಷಣೆ ಭಾರತೀಯರ ಬೆಂಬಲವಿಲ್ಲದೆ ಆಡಳಿತ ಅಸಾಧ್ಯವೆಂಬ ಅರಿವು<br>• ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿ<br>• ಭಾರತೀಯರ ಬೆಂಬಲಕ್ಕೆ ಒತ್ತು<br>• ಮುಂದಿನ ಹೋರಾಟಕ್ಕೆ ಪರ್ಯಾಯಮಾರ್ಗದ ಚಿಂತನೆ | ½<br>½<br>½<br>½<br>½<br>½<br>½<br>½ |
| 36 | **ಅರಣ್ಯಗಳು ಮಾನವ ಮತ್ತು ಪರಿಸರಕ್ಕೆ ಬಹಳಷ್ಟು ಉಪಯುಕ್ತ ಸಂಪನ್ಮೂಲವಾಗಿವೆ**<br>• ಶುದ್ಧ ವಾಯು ಆಹಾರ ಹಾಗೂ ಮೇವನ್ನು ಪೂರೈಸುತ್ತದೆ<br>• ಉತ್ತಮ ಮಳೆ ತರಲು ಸಹಾಯಕ<br>• ಮಣ್ಣಿನ ಸವೆತ ನಿಯಂತ್ರಣ<br>• ಪ್ರಾಣಿ ಪಕ್ಷಿಗಳಿಗೆ ಆಶ್ರಯ ತಾಣ<br>• ಔಷಧಿ ಸಸ್ಯಗಳ ಆಗರ<br>• ಪ್ರವಾಸಿಗರನ್ನು ಆಕರ್ಷಿಸುತ್ತದೆ<br>• ಉದ್ಯೋಗ ಅವಕಾಶ ಒದಗಿಸುತ್ತದೆ<br>• ಜೈವಿಕ ಪರಿಸರ ಸಮತೋಲನ ಕಾಪಾಡುತ್ತದೆ | ½<br>½<br>½<br>½<br>½<br>½<br>½<br>½ |
| 37 | **ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳು**<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ವನ್ನು ಕೇಂದ್ರ ಹಾಗೂ ರಾಜ್ಯದಲ್ಲಿ ಪ್ರಾರಂಭಿಸಿದೆ<br>• ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ<br>• ರಾಷ್ಟ್ರೀಯ ಹಾಗೂ ರಾಜ್ಯ ಮಹಿಳಾ ಆಯೋಗಗಳ ಸ್ಥಾಪನೆ<br>• ಮಹಿಳಾ ಅಭಿವೃದ್ಧಿ ನಿಗಮ ಸ್ಥಾಪನೆ<br>• ಸಕಿ ಒನ್ ಸ್ಟಾಪ್ ಸೆಂಟರ್ ಆರಂಭ<br>• ಕೌಟುಂಬಿಕ ದೌರ್ಜನ್ಯ ಕಾಯ್ದೆ 2005 ಜಾರಿ<br>• ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ 2013ರಲ್ಲಿ ಜಾರಿಗೊಳಿಸಲಾಗಿದೆ<br>• ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡ 50ರಷ್ಟು ಸ್ಥಾನ ಮೀಸಲು<br>• ಮಹಿಳಾ ಸಹಾಯವಾಣಿ ಸಂಖ್ಯೆ 1091 ಸೌಲಭ್ಯ ಕಲ್ಪಿಸಿದೆ<br>• ಲೋಕಸಭೆ ವಿಧಾನಸಭೆಯಲ್ಲಿ ಮಹಿಳೆಯರಿಗೆ 33ರಷ್ಟು ಮೀಸಲಾತಿ ಒದಗಿಸಲು ನಾರಿ ಶಕ್ತಿ ವಂದನ ಅಧಿನಿಯಮ ಸಂಸತ್ತು ಅಂಗೀಕರಿಸಿದೆ | ½<br>½<br>½<br>½<br>½<br>½<br>½<br>½ |

Scanned with OKEN Scanner

38

